ಗಮನ ಸೆಳೆಯುವ ಸೂಚನೆಗಳು

1) "ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿಯ ಚುನಾವಣೆಗಳನ್ನು ಮುಂದೆ ಹಾಕಿ ಆಡಳಿತಗಾರರನ್ನು ನೇಮಿಸಿ ಆದೇಶ ಹೊರಡಿಸಿರುವ ಬಗ್ಗೆ"

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯದ ಬಗ್ಗೆ ನಾನು ಮಾನ್ಯ ಧಾರ್ಮಿಕ ಮತ್ತು ದತ್ತಿ, ನಿಯಂತ್ರಿತ ಮಾರುಕಟ್ಟೆ ಮತ್ತು ಖುಷಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ, ದತ್ತಿ, ಮಾರುಕಟ್ಟೆ ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮುಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಸರ್ಕಾರ ಈಗಾಗಲೇ ಉದ್ದೇಶಿಸಿರುವಂತೆ ಎಲ್ಲಾ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿಗಳ ಚುನಾವಣೆ, ಜೂನ್ ೮೮ ಮತ್ತು ನಂತರ ನಡೆಸ ಬೇಕಾಗಿ ರೈತರ ಹಿತದೃಷ್ಟಿಯಿಂದ ಮುಂದಿನ ಆದೇಶದವರೆಗೆ ಇವುಗಳನ್ನು ಮುಂದುಡಲಾಗಿದೆ. ನಿಗದಿತ ಕಾಲಾವಧಿಯೊಳಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಕೂಡ ಆದೇಶಿಸಲಾಗಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಆದ ರಸಲುವಾಗಿ ನಾನು ಹೇಳಿದೆ. ಡೆಮಾಕ್ರಟಿಕ್ ನಾರ್ಮ್ಸ್ ಅನ್ನು ಅಪ್‌ಹೋಲ್ಡ್ ಮಾಡುವ ಸರ್ಕಾರ ಇವೊತ್ತು ಡೆಮಾಕ್ರಸಿಯನ್ನು ಎಲ್ಲಾ ಕಡೆ ಕೊಲ್ಲಲಿಕ್ಕೆ ಹೊರಟಿದೆ, ಆಡಳಿತಾಧಿಕಾರಿಗಳಿಗೆ ಅಧಿಕಾರವನ್ನು ಕೊಡುವುದಾದರೆ ಇದು ಭಾರಿ ಅನ್ಯಾಯ ಆಗುತ್ತದೆ. ಮುನಿಸಿಪಾಲಿಟಿಗಳಿಗೆ ಅರು ತಿಂಗಳು ಎಕ್ಸ್‌ಟೆಂಡ್ ಮಾಡಿದ್ದೀರಿ, ಎಪಿಎಂಸಿ ಗೆ ಮಾಡುವುದಿಲ್ಲ ಎಂದು ಹೇಳುತ್ತೀರಿ. ಇದು ಯಾವ ಧರ್ಮ, ಆದುದರಿಂದ ಇನ್ನೊಮ್ಮೆ ಮುಖ್ಯ ಮಂತ್ರಿಗಳ ಹತ್ತಿರವಾಗಲೀ, ಅಥವಾ ಕ್ಯಾಬಿನೆಟ್‌ನಲ್ಲಿಯಾಗಲೀ ವಿಚಾರ ಮಾಡಿ ಇದನ್ನು ಹೇಳಿ. ಇಲ್ಲದಿದ್ದರೆ ಇದು ನಿಮ್ಮ ಮೂಲಭೂತವಾದ ತತ್ವಕ್ಕೆ ಕೊಡಲಿ ಪೆಟ್ಟು ಆಗುತ್ತದೆ. ಅಗ್ರಿಕಲ್ಚರಲ್ ಪ್ರೊಡ್ಯೂಸ್ ಕಮಿಟಿ ಎಲೆಕ್ಟೆಡ್ ಬಾಡಿ ಇದ್ದಾಗ ಚುನಾವಣೆಗಳನ್ನು ಮಾಡಿ. ಇವೊತ್ತೇ ಚುನಾವಣೆ ಗಳನ್ನು ಮಾಡಿದರೂ ನಮ್ಮ ಅಭ್ಯಂತರ ಇಲ್ಲ, ಕಮಿಟಿ ಕಾನ್‌ಸ್ಟಿಟ್ಯೂಟ್ ಆದ ಮೇಲೆ ಹೇಗೆ ಆಗಬೇಕು ಎಂದು ವಿಚಾರ ಮಾಡಿ. ಆದರೆ ಅದಕ್ಕೆ ಇನ್‌ಸಲ್ಟ್ ಆಗುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೀರಿ, ಮಾಡಬೇಡಿ. ಆಡಳಿತಾಧಿಕಾರಿಗಳ ಕೈಗೆ ಅಧಿಕಾರವನ್ನು ಕೊಡುತ್ತಿದ್ದೀರೀ ನೀವು ಹೊಸದಾಗಿ ಬಂದಿದ್ದೀರಿ. ನಾನು ನಿಮಗೆ ಜೋರು ಮಾಡುವುದಿಲ್ಲ, ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ವಿಚಾರ ಮಾಡಿ ಯೋಗ್ಯವಾದ ನಿರ್ಣಯವನ್ನು ಮಾಡಿ, ನಿಮ್ಮ ಸಬ್ಜೆಕ್ಟ್ ಮಂಡನೆ ಮಾಡುವಾಗ ನಿರ್ದಿಷ್ಟವಾದ ನಿಲುವು ಪಡೆದು ಬನ್ನಿ ಎಂದು ಹೇಳುತ್ತೇನೆ.

2) ಸೂಕ್ತವಾದ ಪರೀಕ್ಷೆ,ತನಿಖೆ ಇಲ್ಲದೆ ನೀಡಲಾಗುತ್ತಿರುವ ಚಾಲಕರ ಪರವಾನಗಿ ಯಿಂದಾಗಿ.'' ದಿನಾಂಕ 8ನೇ ಮೇ 1988 ರಂದು ಹಿರಿಯೂರಿನ ಸಮೀಪ ನಡೆದ ಅಪಘಾತ ಹಾಗೂ ಉಂಟಾಗುತ್ತಿರುವ ಅಪಘಾತಗಳ ಬಗ್ಗೆ

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯದ ಬಗ್ಗೆ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ತಾರೀಖು ೭-೫-೧೯೮೮ ರಂದು ಬೆಳಗಿನ ಜಾವ ೩-೦೦ ಗಂಟೆಯ ವೇಳೆಯಲ್ಲಿ ಜೆ.ಡಿ.ಎಫ್ ೪೩೬ ನಂಬರಿನ ಮೆಟಡೋರ್ ವ್ಯಾನ್ ಟಿ.ಸಿ.ಎಸ್. ೧೩೩೦ ನಂಬರಿನ ಖಾಸಗಿ ಬಸ್ಸು ಒಂದಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ೬ ಜನರು ಸತ್ತು ೨೯ ಜನರಿಗೆ ವಿವಿಧ ರೀತಿ ಗಾಯಗಳಾಗಿದ್ದದ್ದು ವರದಿಯಾಗಿದೆ. ಸತ್ತವರೆಲ್ಲರೂ ಸಹ ಮೆಟಡೋರ್ ವ್ಯಾನ್‌ನಲ್ಲಿ ಇದ್ದವರು. ಈ ಘಟನೆ ಹಿರಿಯೂರು ಪಟ್ಟಣದಿಂದ ೮ ಕಿ. ಮೀಟರ್ ದೂರದಲ್ಲಿರುವ ವಡೆ ಹಳ್ಳಿ ಗೇಟ್ ಹತ್ತಿರ ರಾಷ್ಟ್ರೀಯ ಹೆದ್ದಾರಿ ನಂಬರು ೪ರ ಮೇಲೆ ಸಂಭವಿಸಿತು. ಅಪಘಾತಕ್ಕೆ ಒಳಗಾದ ಬಸ್ಸು ಆಂಧ್ರ ಪ್ರದೇಶಕ್ಕೂ ಮೆಟಾಡೋರ್ ವ್ಯಾನ್ ಗೋವಕ್ಕೂ ಪೋಗು

ತ್ತಿದ್ದವೆಂದು ವರದಿಯಾಗಿದೆ. ಮೆಟಡೊರ್ ವ್ಯಾನ್‌ನ ಚಾಲಕ (ಸತ್ತವರ ಪೈಕಿ ಒಬ್ಬ) ಅತಿ ವೇಗದಿಂದ ವಾಹನವನ್ನು ಚಲಿಸಿದ್ದರಿಂದ ಈ ಅಪಘಾತ ಉಂಟಾಯಿತೆಂದು ವರದಿಯಾಗಿದೆ. ಈ ಬಗ್ಗೆ ಸ್ಥಳೀಯ ಪೋಲೀಸರು ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ತಪಾಸಣೆಯನ್ನು ನಡೆಸುತ್ತಿದ್ದಾರೆ.

ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ಪ್ರತಿ ವರ್ಷ ಆಗುತ್ತಿರುವ ಅಪಘಾತಗಳ ಅಂಕಿ ಅಂಶಗಳು ಈ ರೀತಿ ಇವೆ :—

	ಬೆಂಗಳೂರು ನಗರ		ಕರ್ನಾಟಕ ರಾಜ್ಯ (ಬೆಂಗಳೂರು ನಗರ ಸೇರಿ)		
	ಪ್ರಾಣಾಂತಿಕ	ಪ್ರಾಣಾಂತಿಕ ವಲ್ಲದ	ಪ್ರಾಣಾಂತಿಕ	ಪ್ರಾಣಾಂತಿಕ ವಲ್ಲದ	ಒಟ್ಟು
೧	೨	೩	೪	೫	೬
೧೯೮೫	೪೦೩	೪೪೮೨	೨೪೪೬	೧೨೮೨೪	೧೫೨೭೦
೧೯೮೬	೩೮೪	೪೨೬೪	೨೭೦೮	೧೩೩೮೪	೧೬೦೧೨
೧೯೮೭	೪೦೩	೫೧೮೯	೨೧೨೨	೧೫೬೭೭	೧೭೮೯೯

ಈ ಅಂಕಿ ಅಂಶಗಳಲ್ಲಿ ವ್ಯಕ್ತವಾಗುವಂತೆ ಅಪಘಾತಗಳು ಹೆಚ್ಚಾಗುತ್ತಿವೆ. ಇವುಗಳ ಪ್ರತಿ ಬಂಧಕಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ. ಉದಾಹರಣೆಗೆ ಪ್ರತಿ ಜಿಲ್ಲೆಯಲ್ಲೂ ಸಹ ರಸ್ತೆಯ ಸುರಕ್ಷಣಾ ಸಮಿತಿಗಳನ್ನು ನೇಮಿಸಲಾಗಿದೆ ಈ ಸಮಿತಿಗಳು ಮತ್ತು ಪ್ರಾದೇಶಕ ಸಾರಿಗೆ ಪ್ರಾಧಿಕಾರಗಳು ಅಪಘಾತಗಳ ಪ್ರತಿಬಂಧಕಕ್ಕೆ ಸೂಕ್ತ ಕಾರ್ಯ ಯೋಜನೆಯನ್ನು ಹಾಕಿಕೊಂಡು ಕ್ರಮಗಳನ್ನು ತೆಗೆದುಕೊಂಡಿವೆ. ಇದರಲ್ಲಿ ಡ್ರೈವಿಂಗ್ ಲೈಸನ್ಸ್ ಕೊಡುವಾಗ ಕಟ್ಟುನಿಟ್ಟಾಗಿ ನಿಯಮಗಳನ್ನು ಅನುಸರಿಸುವುದು, ಚಾಲನೆಯಲ್ಲಿ ಅಜಾಗರೂಕತೆತೋರಿಸುವಂತಹವರು ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವುದು ಸೇರಿವೆ ಅಲ್ಲದೆ ಈ ಅಪಘಾತಗಳು ವಾಹನ ಪರವಾನಗಿ ಪತ್ರ ಕೊಡುವುದರಲ್ಲಿ ಹಾಗೂ ವಾಹನಗಳನ್ನು ಪರೀಕ್ಷಿಸುವ ನಿರ್ಲಕ್ಷತ್ವೆಯಿಂದಲೇ ಆಗಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಹೆಚ್ಚುತ್ತಿರುವ ವಾಹನಗಳು ಮತ್ತು ಜನ ಸಂಖ್ಯೆ ಇತ್ಯಾದಿ ಕಾರಣಗಳಿಂದ ಅಪಘಾತಗಳು ನಾವು ಆಶಿಸುವಷ್ಟು ಇಳಿಮುಖವಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಲೆಕ್ಕದ ಪ್ರಕಾರ ೧೯೮೭ರಲ್ಲಿ ಬೆಂಗಳೂರು ನಗರದಲ್ಲಿ ೪೦೩ ಪ್ರಾಣಾಂತಿಕ ಅಪಘಾತಗಳು ಹಾಗೂ ಪ್ರಾಣಾಂತಿಕವಲ್ಲದ್ದು ೫೧೮೯ ನಡೆದಿದೆ. ಕರ್ನಾಟಕ ರಾಜ್ಯದಲ್ಲಿ ಪ್ರಾಣಾಂತಿಕ ಅಪಘಾತಗಳು ೩೧೭೨ ಹಾಗೂ ಪ್ರಾಣಾಂತಿಕ ವಲ್ಲದ್ದು ೧೫ ೬೭೭ ಎಂದು ಹೀಗೆ ೧೫ ಸಾವಿರ, ೧೭ ಸಾವಿರ ಡಿಟೇಲ್ಸ್ ಕೊಟ್ಟಿದ್ದಾರೆ. ರಾಜ್ಯದಲ್ಲಿ ಆಕ್ಸಿಡೆಂಟ್ಸ್‌ಗಳು ವಿಪರೀತ ಆಗುತ್ತಿವೆ. ನಾನು ತಿಂದುಕೊಂಡಿರುವುದು ಇಂಥ ಕಾರಣಗಳು ನ್ಯಾಯವಾದುದು ಆಗಿದೆಯೆಂದು.ಆದರೆ ದುರಾದೃಷ್ಟವಶಾತ್ ಡ್ರೈವಿಂಗ್ ಲೈಸೆನ್ಸ್ ಇಷ್ಯೂ ಮಾಡುವಾಗ ತಮಗೆ ತಿಳಿದಹಾಗೆ ಏಜೆಂಟ್‌ಗಳು ದುಡ್ಡು ಕಳಿಸಿದರೆ ಮನೆಯಿಂದ ಲೈಸೆನ್ಸ್‌ಕೊಡುವ ಪದ್ಧತಿ ನಡೆಯುತ್ತಿದೆ. ನಮ್ಮಲ್ಲಿ ಇಲ್ಲದಿರಬಹುದು ಪಕ್ಕದ ಪ್ರಾಂತ್ಯಗಳಲ್ಲಿರಬಹುದು.ಒಂದು ಸಾವಿರ ರೂಪಾಯಿ ಖರ್ಚು ಕೊಟ್ಟರೆ ಆರ್.ಟಿ.ಓ. ಆಫೀಸ್‌ನಲ್ಲಿ ಬಸ್ ಏಜೆಂಟ್‌ರು ಇದ್ದಾರೆ ಅವರು ಏನೂ ಪರೀಕ್ಷೆಗಳು ಇಲ್ಲದೆ ಡ್ರೈವಿಂಗ್ ಲೈಸೆನ್ಸ್ ತಂದುಕೊಡುತ್ತಾರೆ. ಇದರಿಂದ ಆಕ್ಸಿಡೆಂಟ್ಸ್‌ಗಳು ಜಾಸ್ತಿ ಆಗುತ್ತಾ ಇವೆ. ಮೊದಲು ಡ್ರೈವಿಂಗ್ ಲೈಸೆನ್ಸ್ ಕೊಡುವಾಗ ಬಹಳ ಟೆಸ್ಟ್‌ಗಳನ್ನು ಮಾಡುತ್ತಿದ್ದರು. ಪ್ರತ್ಯೇಕವಾಗಿ ಡ್ರೈವಿಂಗ್ ಲೈಸೆನ್ಸ್ ಇಷ್ಯೂ ಮಾಡಬೇಕು. ಆದರೆ ಅದು ಈಗ ಆಗುತ್ತಿಲ್ಲ. ಒಂದು ಉದಾಹರಣೆ

ಯನ್ನು ಈ ಬಗ್ಗೆ ಹೇಳಬೇಕಾದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಡ್ರೈವರ್ಸ್‌ಗಳನ್ನು ಅಪಾಯಿಂಟ್ ಮಾಡಿಕೊಂಡರು. ೬ ತಿಂಗಳ ಹಿಂದೆ ಡ್ರೈವಿಂಗ್ ಲೈಸೆನ್ಸ್ ತೆಗೆದುಕೊಂಡವರೆಲ್ಲರೂ ಸಹ ಅಪಾಯಿಂಟ್ ಆಗಿದ್ದಾರೆ. ಈಗ ಡ್ರೈವರ್ಸ್ ಬಂದು ಹತ್ತು ದಿನಗಳಲ್ಲಿ ೧೦ ಆಕ್ಸಿಡೆಂಟ್ಸ್‌ಗಳನ್ನು ಒಂದು ವಾರದಲ್ಲಿ ಮಾಡಿದ್ದಾರೆ. ಡ್ರೈವಿಂಗ್ ಲೈಸೆನ್ಸ್ ಕೊಡುವಾಗ ಒಂದು ಸ್ಟ್ರಿಕ್ಟ್ ಡಿಸಿಪ್ಲಿನ್ ಇನ್ನು ಅಧಿಕಾರಿಗಳು ಇಂಪೋಸ್ ಮಾಡದೇ ಇರುವುದೇ. ಈ ಒಂದು ಅಪಘಾತಗಳಿಗೆ ಕಾರಣವಾಗಿದೆ ಎಂದು ಹೇಳುತ್ತೇನೆ.

ಏಕೆಂದರೆ, ತಮಿಂಗೆ ಗೊತ್ತಿರಂತೆ ಇತ್ತೀಚೆಗೆ ಹೆಬ್ಬಗೋಡ್ ಹತ್ತಿರ ೮ ಜನ, ಕೆಂಗೇರಿ ಹತ್ತಿರ ೬ ಜನ, ಹೊಸಕೋಟೆ ಹತ್ತಿರ ೪ ಜನ ಮತ್ತೆ ಈ ಹಿರಿಯೂರು ಹತ್ತಿರ ೬ ಜನರು ಸತ್ತಿದ್ದಾರೆ. ನಾವು ಮನೆಯಿಂದ ಹೊರಗಡೆ ಹೊರಟರೆ ಪುನಃ ಕ್ಷೇಮವಾಗಿ ಮನೆಗೆ ವಾಪಸ್ ಬರುತ್ತೇವೋ ಅಥವಾ ಇಲ್ಲವೋ ಎಂಬ ಅನುಮಾನ ಇದರಿಂದ ಬರುತ್ತಿದೆ. ಈ ವಾಹನಗಳ ಅಪಘಾತಗಳು ಹೆಚ್ಚಾಗಿ ಬೆಂಗಳೂರು ಸುತ್ತಮುತ್ತ ಹೆಚ್ಚಾಗಿ ನಡೆಯುತ್ತಿವೆ. ಇದಕ್ಕೆ ಮುಖ್ಯ ಕಾರಣವೆಂದರೆ, ಡ್ರೈವರ್ಸ್ ಕುಡಿದು ವಾಹನಗಳನ್ನು ನಡೆಸುತ್ತಾರೆ. ಇದನ್ನು ತಪ್ಪಿಸುವುದಕ್ಕೆ ನೀವು ಸೀರಿಯಸ್ ಆದಂಥ ಕ್ರಮವನ್ನು ಕೈಕೊಳ್ಳುತ್ತಿಲ್ಲ. ವಾಹನಗಳನ್ನು ನಡೆಸುವ ಬಗ್ಗೆ ಇರತಕ್ಕಂಥ ನಿಯಮಗಳನ್ನು ಕಟ್ಟುನಿಟ್ಟಾಗಿ ನೀವು ಜಾರಿಗೊಳಿಸಬೇಕು. ಕೆಲವರು ಅಜಾಗರೂಕತೆಯಿಂದ ವಾಹನಗಳನ್ನು ನಡೆಸುತ್ತಾರೆ. ಇದನ್ನು ತಪ್ಪಿಸಲು ನೀವು ಕ್ರಮಕೈಕೊಳ್ಳುತ್ತಿಲ್ಲ. ಮೊದಲು ಡ್ರೈವರ್ಸ್‌ಗಳನ್ನು ಟೆಸ್ಟ್ ಮಾಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ವಾಹನ ನಡೆಸುವವರಲ್ಲಿ ಒಂದು ರೀತಿಯ ಡಿಸಿಪ್ಲಿನ್ ಇರಬೇಕು. ಇದನ್ನು ನೀವು ಕಟ್ಟುನಿಟ್ಟಾಗಿ ಇಂಪೋಸ್ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈ ಅಪಘಾತಗಳು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ನಮ್ಮ ರಾಷ್ಟ್ರದಲ್ಲಿಯೇ ವಿಪರೀತವಾಗಿ ಹೆಚ್ಚುತ್ತಿವೆ. ಇದು ನಮ್ಮೆಲ್ಲರ ಮನಸ್ಸನ್ನು ನೋಯಿಸತಕ್ಕಂಥ ಸಂಗತಿ ಆಗಿದೆ. ಈ ಅಪಘಾತಗಳು ತಡೆಗಟ್ಟುವುದಕ್ಕೆ ನಮ್ಮ ಸರ್ಕಾರ ವಿಶೇಷವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರಿಂದ ದೊಡ್ಡ ಪರಿಣಾಮ ಉಂಟಾಗುತ್ತದೆಂದು ನನಗನಿಸುವುದಿಲ್ಲ. ಆದ್ದರಿಂದ ಈ ಬಗ್ಗೆ ನಾನೇ ಸಾರ್ವಜನಿಕರ ಮತ್ತು ವಿಶೇಷವಾಗಿ ಚಾಲಕವರ್ಗದವರ ಸಹಕಾರವನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ವಾಹನಗಳಿವೆ. ೧೫ ರಿಂದ ೧೬ ಲಕ್ಷಕ್ಕೂ ಹೆಚ್ಚು ವಾಹನ ಚಾಲಕರು ಇದ್ದಾರೆ. ಈ ಅಪಘಾತಗಳು ಕೇವಲ ವಾಹನ ಚಾಲಕರಿಂದಲೇ ಆಗುತ್ತದೆಂದು ಹೇಳುವುದು ಕಷ್ಟ. ಇಕ ಟ್ಟಾದ ರಸ್ತೆಗಳು ಇರುವ ಕಡೆಗಳಲ್ಲಿ ಹೆಚಾ ಗಿ ಈ ಅಪಘಾತಗಳು ಆಗಿರುವಂತಹ ಉದಾಹರಣೆಗಳು ಇವೆ. ಅಪಘಾತಗಳನ್ನು ವಿಶೇಷವಾಗಿ ತಡೆಗಟ್ಟುವುದಕ್ಕಾಗಿ ಈ ವರ್ಷ ನಾವು ರೋಡ್ ಸೇಫ್ಟಿ ವೀಕ್ ಎಂದು ಆಚರಣೆ ಮಾಡುತ್ತಿದ್ದೇವೆ. ಬರುವ ಜೂನ್ ೬ ರಿಂದ ೧೨ನೇ ತಾರೀಖಿನವರೆಗೆ ಒಂದು ವಾರ ಕಾಲ ಇಡೀ ರಾಜ್ಯದಲ್ಲಿ ರೋಡ್ ಸೇಫ್ಟಿ ವೀಕ್ ಅನ್ನು ಪೋಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ನಮ್ಮ ಮೋಟಾರ್ ವಾಹನ ಇಲಾಖೆಗಳ ವತಿಯಿಂದ ಆಚರಿಸುತ್ತೇವೆ. ಈ ಮೂರು ಇಲಾಖೆಗಳ ಸಹಕಾರದಿಂದ ಈ ರೋಡ್ ಸೇಫ್ಟಿ ವೀಕ್ ಅನ್ನು ಆಚರಿಸುವುದರ ಮೂಲಕ ವಿಶೇಷವಾಗಿ ಈ ಅಪಘಾತಗಳ ಬಗ್ಗೆ ಡ್ರೈವರ್ಸ್‌ಗಳಲ್ಲಿ ಒಂದು ರೀತಿಯ ಅವೇರ್‌ನೆಸ್ ಹುಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಲ್ಲಾ ಜಿಲ್ಲೆಗಳಲ್ಲಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೋಡ್ ಸೇಫ್ಟಿ ಕಮಿಟಿ ಗಳನ್ನು ರಚನೆ ಮಾಡಬೇಕೆಂದು ನಮಗೆ ಕೇಂದ್ರ ಸರ್ಕಾರದಿಂದ ಬಂದ ಸಲಹೆಯ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿಯೂ ಇಂತಹ ಕಮಿಟಿಗಳನ್ನು ರಚನೆ ಮಾಡಿ ಅವರಿಗೆಲ್ಲಾ ಸ್ವಲ್ಪ ಹಣವನ್ನು ಸಹ ಕೊಟ್ಟಿದ್ದೇವೆ. ಇಲ್ಲಿಯವರೆಗೆ ಒಂದು ಸಿಗ್ನಲ್ ಬೋರ್ಡ್ ಹಾಕಿಸಲು ಸಹ ಆವರಲ್ಲಿ ಹಣ ಇರುತ್ತಿರಲಿಲ್ಲ. ಆದ್ದರಿಂದ ನಮ್ಮ ರಸ್ತೆ ಸಾರಿಗೆ ಸಂಸ್ಥೆಯಿಂದ ಇಂತಹ ಕೆಲಸಗಳನ್ನು ಮಾಡಿಸಲು ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದರ ಜೊತೆಗೆ ನಾನು ಪ್ರವಾಸದಲ್ಲಿದ್ದಾಗ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು, ಪೋಲೀಸ್ ಸೂಪರಿಂಟೆಂಡೆಂಟ್ ಆವರನ್ನು ಹಾಗೂ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳನ್ನು ಕರೆಯಿಸಿ ಈ ಬಗ್ಗೆ ಚರ್ಚೆ ಮಾಡಿ, ಆಕ್ಸಿಡೆಂಟ್ ಪ್ರೋನ್ಸ್ ಸ್ಪಾಟ್‌ಗಳನ್ನು ಕಂಡುಹಿಡಿದು, ಆ ಜಾಗದಲ್ಲಿ ಅಪಘಾತಗಳು ಹೆಚ್ಚಾಗಿ ಆಗಲು ಕಾರಣವೇನೆಂಬುದನ್ನು ಅನ

ಲೈಜ್ ಮಾಡಿ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಲೈಸೆನ್ಸ್ ಕೊಡುವ ವಿಷಯ ಹೇಳಿದ್ದಾರೆ ಈ ಬಗ್ಗೆ ಮಾನ್ಯ ಸದಸ್ಯರು ಒಂದು ನಿರ್ದಿಷ್ಟವಾದಂಥ ಕೇಸ್ ಇದ್ದರೆ. ಅದನ್ನು ನನ್ನ ಗಮನಕ್ಕೆ ತಂದರೆ, ನಾನು ನಿರ್ದಾಕ್ಷಿಣ್ಯವಾಗಿ ಆರ್.ಟಿ.ಓ. ಮೇಲೆ ಕ್ರಮಕೈಕೊಳ್ಳುತ್ತೇನೆ. ಅವರು ಹೇಳಿದ್ದರಲ್ಲಿ ಸತ್ಯಾಂಶ ಇದೆ. ಇಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಕಂಡಿಯುವವರಿಗೆ ಲೈಸೆನ್ಸ್ ಕೊಡುವುದನ್ನು ತಪ್ಪಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಈ ಡ್ರೈವಿಂಗ್ ಲೈಸನ್ಸ್ ಕೊಡುವ ಬಗ್ಗೆ ಎರಡೂ ರೀತಿಯ ದೂರುಗಳು ಕೇಳಿ ಬರುತ್ತಿವೆ. ಒಂದನೇದೂರೂ ಎಂದರೆ, ದುಡ್ಡು ಕೊಟ್ಟರೆ ಸಾಕು, ಮನಬಾಗಿಲಿಗೆ ಲೈಸನ್ಸ್ ತಂದುಕೊಡುತ್ತಾರೆ ಎಂದು ಕೆಲವರು ಹೇಳುತ್ತಾರೆ. ಎರಡನೆಯ ದೂರು ಎಂದರೆ, ನಮಗೆ ಚೆನ್ನಾಗಿ ಡ್ರೈವಿಂಗ್ ಬರುತ್ತದೆ, ಆದರೆ ನಾವು ದುಡ್ಡು ಕೊಡಲಿಲ್ಲವೆಂಬ ಕಾರಣದಿಂದ ಡ್ರೈವಿಂಗ್ ಲೈಸನ್ಸ್‌ನ್ನು ಕೊಟ್ಟಿಲ್ಲ ಎಂದು ಇನ್ನೂ ಕೆಲವರು ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದ ಮಟ್ಟಿಗೆ ಹೇಳಬೇಕಾದರೆ, ಈ ಆರ್.ಟಿ.ಓ. ಕಛೇರಿಗಳಲ್ಲಿ ಬಹಳ ಕಟ್ಟುನಿಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ನಾವು ಸ್ವಲ್ಪ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಡ್ರೈವಿಂಗ್ ಲೈಸನ್ಸ್ ಪಡೆಯಲು ಕೆಲವರು ಯಾರಿಂದಲೇ ಶಿಫಾರಸ್ ತಂದರೂ ಸಹ ಅದನ್ನು ಗಮನಕ್ಕೆ ತೆಗೆದು ಕೊಳ್ಳಬಾರದು, ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲನೆ ಮಾಡಬೇಕೆಂದು ನಾವು ಅವರಿಗೆ ತಿಳಿಸಿದ್ದೇವೆ ಕೆಲವರು ಹೊರರಾಜ್ಯಗಳಿಂದ ಡ್ರೈವಿಂಗ್ ಲೈಸನ್ಸ್ ತರುತ್ತಾರೆ. ಅಲ್ಲಿ ಲಿಬರಲ್ ಆಗಿ ಲೈಸನ್ಸ್ ಕೊಡುತ್ತಾರೆ. ಅಂತಹ ರಾಜ್ಯಗಳ ಹೆಸರುಗಳನ್ನು ಇಲ್ಲಿ ಹೇಳುವುದು ಸರಿಯಲ್ಲ. ಇದು ಸರಿಯಲ್ಲ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಾರಿಗೆ ಸಚಿವರುಗಳ ಸಮ್ಮೇಳನದಲ್ಲಿ ಹೇಳಿದ್ದೇನೆ, ಆಫ್ಟ್ ಆಲ್ಲ. ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಅಧಿಕಾರಿಗಳ ಗಮನಕ್ಕೂ ಸಹ ಇದನ್ನು ತಂದಿದ್ದೇವೆ. ಮತ್ತೆ ಕೋಲಾರದಲ್ಲಿ ಇತ್ತೀಚೆಗೆ ಕೆ.ಎಸ್.ಆರ್.ಟಿ.ಸಿ.ಯವರು ಮಾಡಿದ ರೆಕ್ರೂಟ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ 6 ತಿಂಗಳ ಹಿಂದೆ ಡ್ರೈವಿಂಗ್ ಲೈಸನ್ಸ್ ಪಡೆದವರಿಗೆ ಕೆಲಸ ಕೊಟ್ಟಿದ್ದಾರೆಂದು ಹೇಳಿದರು. ಇದರ ಬಗ್ಗೆ ನಾನು ವಿಚಾರಣೆ ನಡೆಸಿದ್ದೇನೆ. ಆ ರೀತಿ ಯಾರಿಗೂ ಕೆಲಸ ಕೊಟ್ಟಿಲ್ಲ. ಮಾನ್ಯ ಸದಸ್ಯರಿಗೆ ಯಾರೋ ತಪ್ಪು ಮಾಹಿತಿ ಕೊಟ್ಟಿರಬಹುದು. ಒಂದುವೇಳೆ ಈ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಅವರ ಬಳಿ ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ನಾನು ಆ ಬಗ್ಗೆ ಕ್ರಮ ಕೈಕೊಳ್ಳುತ್ತೇನೆ.

ಮತ್ತೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಈ ಮಿನಿಮಂ ಏಜ್ ಏನಿದೆ ಅದು ಹದಿನೆಂಟೋ, ಇಪ್ಪತ್ತೊಂದೋ ಏನೋ ಇತ್ತು. ಅದನ್ನು ಏನಿಮಂ ೨೫ ಎಂದು ಮಾಡಿ ಮ್ಯಾಕ್ಸಿಮಂ ೩೫–೩೬ ವರ್ಷದ ಪರಿಗೆ ರಿಲ್ಯಾಕ್ಸ್ ಮಾಡಬೇಕು ಎಂದು ಅವರ ಸಿ. ಆಂಡ್ ಆರ್. ರೂಲ್ಸ್‌ಗೂ ಸಹಿತ ಅಮೆಂಡ್‌ಮೆಂಟ್ ತರಲಿಕ್ಕೆ ಪ್ರಪೋಸ್ ಮಾಡಿದ್ದೇನೆ. ಅದರ ಬಗ್ಗೆ ನಿನ್ನೆ ಬೋರ್ಡ್‌ನಲ್ಲಿ ಕ್ರಮವಾ ತೆಗೆದುಕೊಂಡಿದ್ದಾರೆ. ಇದರ ಜೊತೆಗೆ ಡ್ರೈವರ್ಸ್ ಕುಡಿದು ಚಾಲನೆ ಮಾಡುವುದರಿಂದ ಕೆಲವು ಆಕ್ಸಿಡೆಂಟ್ಸ್ ಆಗುತ್ತದೆ ಎಂದು ಹೇಳಿದ್ದಿರಿ, ಇದು ನಿಜ ಕೇವಲ ಡ್ರೈವರ್ಸ್ ಅಂದ ತಕ್ಷಣ ೧೦ ಸಾವಿರ ಕೆ.ಎಸ್.ಆರ್.ಟಿ.ಸಿ. ಡ್ರೈವರ್ಸ್ ಅಷ್ಟೇ ಜ್ಞಾಪಕ ಬರುತ್ತದೆ. ೧೪ ಲಕ್ಷದ ೯೦ ಸಾವಿರ ಇತರೆ ಡ್ರೈವರ್ಸ್ ನಮಗೆ ಜ್ಞಾಪಕ ಬರುವುದಿಲ್ಲ. ೨ ವೀಲರ್ಸ್ ಇರಬಹುದು, ಪೊಪೆಡ್‌ನವರು ಇರಬಹುದು. ಪೊಪೆಡ್‌ನಲ್ಲಿ ಹೋಗತಕ್ಕವರ ಸಂಖ್ಯೆ ಬೆಂಗಳೂರಿನಲ್ಲಿ ಬಹಳ ಹೆಚ್ಚಾಗಿದೆ. ಅಧ್ಯಕ್ಷರೇ, ಕಳೆದ ಎರಡು ವರ್ಷಗಳಲ್ಲಿ ಸುಮಾರು ಒಂದೂವರೆ ಲಕ್ಷ ಪೊಪೆಡ್‌ಗಳು ಬೆಂಗಳೂರಿನಲ್ಲಿ ಹೆಚ್ಚಾಗಿದೆ. ನಾನು ಅವರಿಗೆ ಏನಾದರೂ ಹೆಲ್ಮೆಟ್‌ನ್ನು ಕಂಪಲ್ಸರಿ ಮಾಡಬೇಕು ಎಂದು ಹೇಳಿದ ತಕ್ಷಣ ಹೆಲ್ಮೆಟ್ ಕಂಪನಿಯವರು ಸಾರಿಗೆ ಮಂತ್ರಿಗಳಿಗೆ ೫ ಲಕ್ಷ ಕೊಟ್ಟರಂತೆ, ಅದಕ್ಕೋಸ್ಕರ ಅವರು ಹೆಲ್ಮೆಟ್‌ನ್ನು ಕಂಪಲ್ಸರಿ ಮಾಡುತ್ತಾರೆ ಎಂದು ಪತ್ರಿಕೆಯಲ್ಲಿ ಎಲ್ಲಾ ಬರೆದರು, ಪ್ರಚಾರ ಸಹಿತ ಮಾಡಿದರು. ನಾವು ಸ್ಪಿಕ್ಟಾಗಿ ಅದನ್ನು ಎನ್‌ಫೋರ್ಸ್ ಮಾಡಬೇಕಾಗುತ್ತದೆ ಅದಕ್ಕೆ ನಿಮ್ಮೆಲ್ಲರ ಸಹಕಾರವನ್ನು ಕೇಳುತ್ತೇನೆ. ಜೊತೆಗೆ ನಿಮ್ಮ ಪಕ್ಕದಲ್ಲಿರತಕ್ಕಂಥ ಮಾನ್ಯ ಸದಸ್ಯರಾದ ಪಂಪಾಪತಿಯಂವರ ಸಹಕಾರವನ್ನು ನಾನು ವಿಶೇಷವಾಗಿ ಕೇಳುತ್ತೇನೆ. ಏಕೆಂದರೆ ಅವರು ಕಾರ್ಮಿಕ ಮುಖಂಡರು. ನಿಮ್ಮೆಲ್ಲರಿರತಕ್ಕಂಥ ಕಾರ್ಮಿಕ ಸಂಘಗಳು ಮುಕ್ತ ಮನಸ್ಸಿನಿಂದ ಇದಕ್ಕೆ ಸಹಕಾರವನ್ನು ಕೊಟ್ಟರೆ ಈ ಆಕ್ಸಿಡೆಂಟ್‌ಗಳನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇದು ಬಹಳ ದಾರುಣವಾಗಿರತಕ್ಕಂಥಾದ್ದು ನಮ್ಮೆಲ್ಲರಿಗೂ ನೋವಾಗಿರ

ತಕ್ಕಂಥಾದ್ದು ಇದೆ. ಅದು ವಿನಾಯಿತ್ತದೆ ಎಂದರೆ, ನಮ್ಮ ಮನೆಯಲ್ಲಿ ನಮಗೆ ಬಹಳ ಪ್ರೀತಿಯಿಂದಿರತಕ್ಕವರು ಪತ್ರದೇನೇ ನಮಗೆ ಜ್ಞಾಪಕ ಬರುವುದು ಬಾಕಿ ಸಂದರ್ಭದಲ್ಲಿ ಅದು ನಮಗೆ ಜ್ಞಾಪಕ ಬರುವುದಿಲ್ಲ ಅದಕ್ಕೆ ಸ್ವಲ್ಪ ತಾವೆಲ್ಲರ ಸಹಕಾರವನ್ನು ಕೊಡಬೇಕು ಎಂದು ಹೇಳಿ, ನಮ್ಮ ರಾಜ್ಯದಲ್ಲಿ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕೆ ಆದಷ್ಟು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪಂಪಾಪತಿ.—ನೂರಕ್ಕೆ ನೂರರಷ್ಟು ಸಂಪೂರ್ಣವಾಗಿ ನಮ್ಮ ಸಹಕಾರ ಅವರಿಗೆ ಇದೆ ಎಂದು ನಾನು ಅವರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

(೩) ಕಾರವಾರ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭತ್ತದ ಬೆತ್ತನೆ ಬೀಜಗಳು ರೈತರಿಗೆ ದೊರಕದ ಬರುವ ವರ್ಷ ಸಹ ಉತ್ತರ ಕನ್ನಡ ಜಿಲ್ಲೆಯಲ್ಲಿ ಹತ್ತಿ ಹಾಗೂ ಭತ್ತದ ಉತ್ಪನ್ನ ಕಡಿಮೆಯಾಗಿ ರೈತರಿಗೆ ದುಸ್ಥಿತಿಯುಂಟಾಗುವ ಕುರಿತು.

ಶ್ರೀ ಆರ್. ಎಸ್. ನಾಯಕ್.—ಮಾನ್ಯ ಅಧ್ಯಕ್ಷರೆ. ಬೀಜಗಳ ಕೊರತೆ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಹೇಳಿಕೆಯನ್ನು ಮಾಡುತ್ತೇನೆ.

೧. ಡಿ. ಸಿ. ಹೆಚ್. ೩೨ (ಜಯಲಕ್ಷ್ಮಿ) ಹತ್ತಿ ಬೀಜ

೧೯೮೭-೮೮ನೇ ಸಾಲಿನಲ್ಲಿ ಅತೀ ಉದ್ದ ಎಳೆಯ ಹತ್ತಿಯಾದ ಡಿ ಸಿ. ಹೆಚ್. ೩೨ ಹತ್ತಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದ್ದುದರಿಂದ ೧೯೮೮-೮೯ನೇ ಸಾಲಿನಲ್ಲಿ ಅಧಿಕ ಸಂಖ್ಯೆಯಲ್ಲಿ ರೈತರು ಈ ಬೆಳೆಯನ್ನು ತೆಗೆದುಕೊಳ್ಳಲು ಮುಂದೆ ಬಂದಿರುತ್ತಾರೆ. ಈ ಕಾರಣದಿಂದ ನಿರೀಕ್ಷಿಸಿದ ಬೇಡಿಕೆಗಿಂತ ಹೆಚ್ಚಿನ ಬೇಡಿಕೆ ಈ ತಳಿಯ ಹತ್ತಿ ಬೀಜಕ್ಕೆ ಈ ಸದರಿ ಸಾಲಿನಲ್ಲಿರುತ್ತದೆ.

ಈ ಹಿಂದಿನ ಸಾಲಿನಲ್ಲಿದ್ದ ಬೇಡಿಕೆ ಮತ್ತು ಪೂರಾಟವಾದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ೧೯೮೮-೮೯ನೇ ಸಾಲಿನಲ್ಲಿ ಸರಬರಾಜು ಮಾಡಲು ಕರ್ನಾಟಕ ರಾಜ್ಯ ಬೀಜ ನಿಗಮವು ಒಟ್ಟು ೨,೨೬೦ ಕ್ವಿಂಟಾಲ್‌ನಷ್ಟು ಪ್ರಮಾಣೀಕೃತ ಸಂಕರ ಹತ್ತಿ ಬೀಜವನ್ನು ೧೯೮೭-೮೮ರಲ್ಲಿ ಉತ್ಪಾದಿಸುವ ಗುರಿ ಹೊಂದಿತ್ತು. ಆದರೆ ಹವಾಮಾನದ ವೈಪರೀತ್ಯದಿಂದಾಗಿ ಮತ್ತು ಬಿ ಜೋತ್ಪಾದಕರು ಪೂರ್ಣ ಪ್ರಮಾಣದ ಉತ್ಪಾದನೆಯನ್ನು ಬೀಜ ನಿಗಮಕ್ಕೆ ಒಪ್ಪಿಸಿಲ್ಲವಾದ್ದರಿಂದ ೧,೬೪೮ ಕ್ವಿಂಟಾಲ್‌ನಷ್ಟು ಪ್ರಮಾಣೀಕೃತ ಬೀಜ ಮಾತ್ರ ಲಭ್ಯವಾಗಿರುತ್ತದೆ. ೧೯೮೮-೮೯ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಕರ್ನಾಟಕ ರಾಜ್ಯ ಬೀಜ ನಿಗಮವು ೨೨.೫೦ ಕ್ವಿಂಟಾಲ್‌ನಷ್ಟು ಡಿ.ಸಿ.ಹೆಚ್. ೩೨ ಹತ್ತಿ ಬೀಜವನ್ನು ಹಸುಗೆ ಮಾಡಿರುತ್ತದೆ.

ರಾಜ್ಯದಲ್ಲಿ ಹತ್ತಿ ಬೀಜದ ಉತ್ಪಾದನೆಯ ಕೊರತೆ ಇದ್ದ ಮೂಲಕ ಪ್ರಮಾಣೀಕೃತ ಹತ್ತಿ ಬೀಜವನ್ನು ನೆರೆ ರಾಜ್ಯದ ಬೀಜ ನಿಗಮಗಳಿಂದ ತರುವ ವ್ಯವಸ್ಥೆ ಮಾಡಲಾಗಿದೆ, ಮತ್ತು ಖಾಸಗಿ ಸಂಸ್ಥೆಗಳಿಗೂ ಸಹ ಪ್ರಮಾಣೀಕೃತ ಬೀಜ ತರಲು ಅನುಮತಿ ಕೊಡಲಾಗಿದೆ.

ರಾಜ್ಯದಲ್ಲಿ ೧೯೮೪-೮೫ನೇ ಸಾಲಿನಲ್ಲಿ ೧೦ ಲಕ್ಷ ಹೆಕ್ಟೇರ್ ಹತ್ತಿ ಬೆಳೆಯುವ ಪ್ರದೇಶದಲ್ಲಿ ಗಮನಾರ್ಹವಾದ ಬದಲಾವಣೆಯಾಗಿ ೧೯೮೭-೮೮ನೇ ಸಾಲಿಗೆ ಕೇವಲ ೪ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಇಳಿದಿತ್ತು. ಇದರ ಹಿನ್ನೆಲೆಯಲ್ಲಿ ಹೆಚ್ಚುವರಿ ಬೇಡಿಕೆಯನ್ನು ನಿರೀಕ್ಷಿತವಾಗಿ ಅಂದಾಜು ಮಾಡುವುದು ಸಾಧ್ಯವಾಗಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದಿನ ಸಾಲಿನಲ್ಲಿ ಹತ್ತಿ ಉತ್ಪಾದನೆ ಗಣನೀಯವಾಗಿದ್ದಿಲ್ಲ. ಆದರೆ ವಾಣಿಜ್ಯ ಹತ್ತಿಗೆ ಲಭಿಸುತ್ತಿರುವ ಬೆಲೆಗಳು ಉತ್ತೇಜಕವಾಗಿರುವುದರಿಂದ ರೈತರು ಈ ಜಿಲ್ಲೆಯ ಕೆಲವೊಂದು ತಾಲ್ಲೂಕುಗಳಲ್ಲಿ ಭತ್ತಕ್ಕೆ ಬದಲಾಗಿ ಹತ್ತಿ ಬೆಳೆಯಲಿಂ ಪ್ರಾರಂಭಿಸಿದ್ದಾರೆ.